‘ಚಾಚಿಜಾನ್, ಸರ್ಫರಾಜ್‌ಗೆ ಈ ಎಲ್ಲ ಪಲ್ಲೆ, ತರಕಾರಿಯನ್ನು ಕೊಟ್ಟುಬಿಡಿ. ಅದು ನನ್ನ ಕಡೆಯಿಂದ ಉಡುಗೊರೆ ಅವನಿಗೆ. ಅವನ ಪಾಲಿನ ಬಿರಿಯಾನಿ ನನಗೆ ಕೊಟ್ಟುಬಿಡಿ. ಅವನಿಗೆ ನನ್ನಿಂದ ಒಂದಿಷ್ಟು ಸಹಾಯವಾದಂತಾಗುತ್ತದೆ’ ಎನ್ನುತ್ತಿದ್ದ.

ಅಮ್ಮನಿಗೆ ಬಹಳ ವಯಸ್ಸಾಗಿದೆ. ಆದರೂ ಅವಳಿಗೆ ಇನ್ನೂ ವೀರೇಂದ್ರನ ಮುಖದ ಚಹರೆ ನೆನಪಿರಬಹುದು. ಅದಕ್ಕೆಂದೇ ಅವಳೂ ಒಮ್ಮೊಮ್ಮೆ ‘ನೋಡು ಮಗಾ, ಅವನ ಬಗ್ಗೆ ಒಂದಿಷ್ಟು ತಿಳಿದುಕೊ. ಕೊನೆಗೂ ಮನುಷ್ಯನೇ ಮನುಷ್ಯನಿಗೆ ಆಪ್ತನಲ್ಲವೇ?’ ಎಂದೆನ್ನುತ್ತಿದ್ದಳು.

‘ಹೌದಮ್ಮ, ಆಪ್ತ. ಅದಕ್ಕೆಂದೇ ಇಷ್ಟೊಂದು ವರ್ಷ ಉರುಳಿದರೂ ಅವನು ಒಮ್ಮೆಯೂ ನಮ್ಮ ಬಗ್ಗೆ ಕೇಳಿಲ್ಲ.’

‘ಅಲ್ಲ, ನೀನಾದರೂ ಏನು ಅವನ ಬಗ್ಗೆ ತಿಳಿಯಲು ಪ್ರಯತ್ನಿಸಿದೆಯಾ? ಇನ್ನೊಬ್ಬರ ತಪ್ಪುಗಳನ್ನೆಣಿಸುವುದು ಬಹಳ ಸುಲಭ. ಆದರೆ ತಮ್ಮದೇ ತಪ್ಪುಗಳಿಗಾಗಿ ಶಾಸ್ತಿ ಮಾಡಿಕೊಳ್ಳುವುದು ಅಷ್ಟೇ ಕಠಿಣವಾಗಿರುತ್ತದೆ.’

ಪಕ್ಷಿಗಳು, ಗಾಳಿಗಳು ಮತ್ತು ಮೋಡಗಳು ಗಡಿಯನ್ನು ದಾಟಿ ಇಲ್ಲಿಂದ ಅಲ್ಲಿಗೆ, ಅಲ್ಲಿಂದಿಲ್ಲಿಗೆ ಹೋಗಿ ಬರುತ್ತವೆ. ಆದರೆ, ಜೀವಕ್ಕೆ ಜೀವವಾಗಿದ್ದ ಈ ಗೆಳೆಯರಲ್ಲಿ ಇಂದಿಗೂ ಮಾತುಕತೆಗಳಾಗಿಲ್ಲ. ಹಾಂ... ಗಡಿ ದಾಟಿ ವಸ್ತುಗಳು ಹೋಗಿ ಬರುವುದು ನಡೆದಿದೆ–ಕೈಬಾಂಬುಗಳು, ಬಂದೂಕಿನಿಂದ ಸಿಡಿದ ಗುಂಡುಗಳು, ಮದ್ದುತುಂಬಿದ ಗ್ರೆನೇಡ್‌ಗಳು... ಮತ್ತೆ... ಸೈನಿಕರ ಆರ್ತನಾದಗಳು, ಅವರ ನೋವು... ಅವರ ಬಳಲುವಿಕೆಗಳು.

ಭಾರತ ಪಾಕಿಸ್ತಾನದ ಯುದ್ಧ ಪ್ರಾರಂಭವಾಗಿತ್ತು–ಒಬ್ಬ ತಾಯಿಯ ಇಬ್ಬರು ಮಕ್ಕಳು ತಮ್ಮ ಪಿತ್ರಾರ್ಜಿತ ಆಸ್ತಿಗೆ ಜಗಳಾಡುವಂತೆ. ನ್ಯಾಯಾಲಯಗಳಿಗೆ ಹಾಕುವ ಹಾಜರಿ ಬೇಗ ಮುಕ್ತಾಯಗೊಳ್ಳುವುದಿಲ್ಲ. ಅಂತೆಯೇ ಈ ಎರಡೂ ದೇಶಗಳಲ್ಲಿಯೂ ಮುಗಿಯದ ಜಗಳಗಳು ಅವರು ಒಂದೇ ನೆಲದ ವಾರಸುದಾರರು ಎಂಬುದಕ್ಕೆ ಸಾಕ್ಷಿಯಾಗಿವೆ.

ಹಿಂದಿನ ದಿನಗಳಲ್ಲಿ, ಯಾವ ದಾರಿಯನ್ನು ತುಳಿದು ಮಹಾರಾಜ ರಣಜೀತ್ ಸಿಂಗ್ ಮತ್ತು ಸ್ವಾಮಿ ವಿವೇಕಾನಂದರು ಕಾಶ್ಮೀರವನ್ನು ತಲುಪಿದ್ದರೋ, ಇಂದು ಅದೇ ದಾರಿಯಿಂದ ಮುಂದೆ ನಡೆದು ಮುಜಫರಾಬಾದ್‌ನ ಉತ್ತರದಲ್ಲಿಯ ಕಿಶನಗಂಗಾ ನದಿಯ ದಂಡೆಯ ಗುಂಟ ಹೊರಟು ಹಿಮಾಲಯದ ದ್ರಾಸ ಮತ್ತು ಕಾರ್ಗಿಲ್ ಸೆಕ್ಟರ್‌ನ ಪಶ್ಚಿಮದಲ್ಲಿ ಸರ್ಫರಾಜ್ ಹುಸೇನ್‌ನ ಬಟಾಲಿಯನ್ ಕ್ಯಾಂಪ್ ಹಾಕಿತ್ತು. ಎರಡೂ ಕಡೆಗಳಿಂದ ತಡೆತಡೆದು ಗುಂಡಿನ ದಾಳಿ ನಡೆದಿತ್ತು. ಅದೇಕೋ ಅಲ್ಲಿ ಮಧ್ಯಾಹ್ನದಿಂದ ಸಂಜೆಯವರೆಗೆ ಮೌನ ಪಸರಿಸಿಬಿಡುತ್ತಿತ್ತು. ಬಹುತೇಕ ಮನುಷ್ಯನ ಕುಕೃತ್ಯಗಳಿಂದ ಬೇಸತ್ತ ಎಕೆ–47ಗಳು, ಮದ್ದನ್ನು ಕಾರಿಕೊಂಡ ಟ್ಯಾಂಕ್‌ನ ಬ್ಯಾರಲ್‌ಗಳು ಚಡಪಡಿಸುತ್ತಿದ್ದವು. ರಾತ್ರಿ ಕರಗಲು ಇನ್ನೂ ಸಮಯವಿರುವಾಗಲೇ, ಚೀಡ್ ಮತ್ತು ದೇವದಾರ ವೃಕ್ಷಗಳಲ್ಲಿ ಹಕ್ಕಿಗಳ ಚಿಲಿಪಿಲಿ ಶುರುವಾಗುವ ಮುನ್ನವೇ ಮತ್ತೆ ಮನುಷ್ಯನ ಅಟ್ಟಹಾಸದ ಕಿವಿಗಡಚಿಕ್ಕುವ ಸದ್ದುಗಳ, ಬೆಂಕಿಯುಂಡೆಗಳ ವಿನಿಮಯ ಪ್ರಾರಂಭವಾಗುತ್ತಿತ್ತು. ಯಾರ ಬಾಹುಗಳು ಎಷ್ಟೇ ಎತ್ತರವಾಗಿದ್ದರೂ ಏನಾಯಿತು, ಕೊನೆಗೆ ಆತನೂ ಒಂದಿಲ್ಲೊಂದು ಸಂತೆಯ ಆಳಾಗಿರುತ್ತಾನೆ.

ಸಾಯಂಕಾಲದ ಹೊತ್ತು. ಇನ್ನೇನು ಪಾಳಿ ಬದಲಾಗುವ ಸಮಯ. ಆ ಹೊತ್ತಲ್ಲಿ ಸರ್ಫರಾಜ್ ಗಡಿ ನಿಯಂತ್ರಣ ರೇಖೆ(ಎಲ್.ಓ.ಸಿ.)ಯ ಬಹಳ ಸನಿಹದಲ್ಲಿದ್ದರು. ತನ್ನ ಸೈನಿಕರ ಕ್ಷೇಮ–ಕುಶಲ ವಿಚಾರಿಸಿಕೊಳ್ಳಲು ಅವರು ಹೀಗೆ ಆಗಾಗ ಬರುತ್ತಿದ್ದದ್ದು ಸಾಮಾನ್ಯವಾಗಿತ್ತು. ಅವರ ಪ್ರಕಾರ